ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/08/2015-16 ದಿನಾಂಕ:05-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಎಂ.ಮಲ್ಲಪ್ಪ ತಂದೆ ಲೇಟ್ ಮೀನಕೇರಿ ಮುತ್ಯಪ್ಪ<br>2)ಕೆ.ಚಂದ್ರಪ್ಪ ತಂದೆ ಲೇಟ್ ಸಿದ್ದಪ್ಪ<br>ದಾಸರೋಬನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ತಿಮ್ಮಕ್ಕ ಗಂಡ ಚಂದ್ರಪ್ಪ<br>ಹಿರೇಕುಂಬಳಕುಂಟೆ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 228/1. 228/4. 230ಎ. 233ಎ. 235. 265ಎ/2ಡಿ. ವಿಸ್ತೀರ್ಣ 1-70. 2-92. 2-45. 3-30. 13-68. 0-11. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 228/1. 228/4. 230ಎ. 233ಎ. 235. 265ಎ/2ಡಿ. ವಿಸ್ತೀರ್ಣ 1-70. 2-92. 2-45. 3-30. 13-68. 0-11. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ದಾಸರೋಬನಹಳ್ಳಿ ಗ್ರಾಮದ ಕೆ.ಚಂದ್ರಪ್ಪ ತಂದೆ ಲೇಟ್ ಸಿದ್ದಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹಿರೇಕುಂಬಳಕುಂಬಳಕುಂಟೆ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 10-03-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸದರಿ ಗ್ರಾಮದ ತಿಮ್ಮಕ್ಕ ಗಂಡ ಚಂದ್ರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್ ನಂ:28/2014-15. ದಿನಾಂಕ:11-04-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 16-06-2015 ರಿಂದ 05-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜುರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಹಿರೇಕುಂಬಳಕುಂಟೆ ಗ್ರಾಮದ ಸನಂ 228/1. 228/4. 230ಎ. 233ಎ. 235. 265ಎ/2ಡಿ. ವಿಸ್ತೀರ್ಣ 1-70. 2-92. 2-45. 3-30. 13-68. 0-11. ಎಕ್ರೆ ಜಮೀನುಗಳು ಅರ್ಜಿದಾರರ ತಾಯಿಯವರಾದ ಗಂಗವ್ವ ಗಂಡ ಸಿದ್ದಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಪಟ್ಟ ಇರುತ್ತದೆ. ಇವರು ದಿನಾಂಕ: 12-07-2000 ರಂದು ಹಾಗೂ ಇವರ ಗಂಡನಾದ ಸಿದ್ದಪ್ಪ ಇವರು ದಿನಾಂಕ 15-06-1999 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಗಂಗವ್ವ ಇವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರಾದ ಕೆ. ಚಂದ್ರಪ್ಪ ತಂದೆ ಲೇಟ್ ಸಿದ್ದಪ್ಪ. ಇವರ ಹೆಸರನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

94



ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜುರಾಗಿರುತ್ತಾರೆ. ಅವರಿಗೆ ನೋಟಿಸ್ಸು ಜಾರಿ ಮಾಡಲಾಗಿ ವಿಚಾರಣೆಗೆ ಹಾಜರಾಗಿ ತಮ್ಮ ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನಾಗಲ್ಲಿ ದಾಖಲೆಗಳನ್ನಾಗಲಿ. ಸಲ್ಲಿಸಿರುವುದಿಲ್ಲ. ಇದರಿಂದ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಗೆ ಗೈರು ಹಾಜುರಾಗಿರುವ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹಿರೇಕುಂಬಳಕುಂಟೆ ಗ್ರಾಮದ ಸನಂ 228/1. 228/4. 230ಎ. 233ಎ. 235. 265ಎ/2ಡಿ. ವಿಸ್ತೀರ್ಣ 1–70. 2–92. 2–45. 3–30. 13–68. 0–11. ಎಕ್ರೆ ಜಮೀನುಗಳನ್ನು ಗಂಗವ್ವ ಗಂಡ ಸಿದ್ದಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಕೆ.ಚಂದ್ರಪ್ಪ ತಂದೆ ಲೇಟ್ ಸಿದ್ದಪ್ಪ ಇವರ ಹೆಸರನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 05–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಚಂದ್ರಪ್ಪ ತಂದೆ ಲೇಟ್ ಸಿದ್ದಪ್ಪ. ಎಂ.ಮಲ್ಲಪ್ಪ ತಂದೆ ಮೀನಕೇರಿ ಮುತ್ಯಪ್ಪ ದಾಸರೋಬನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಜಗದೀಶಗೌಡ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ತಿಮ್ಮಕ್ಕ ಗಂಡ ಚಂದ್ರಪ್ಪ ಹಿರೇಕುಂಬಳಕುಂಟೆ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ರತದೆ.